



# ಉರಗ ರಕ್ಷಕ ಉಪನ್ಯಾಸಕ

■ ಚಿತ್ರ-ಬರಹ: ಎಸ್ಕೆ ಕೊನೆಸಾಗರ

ಸಾಮಾನ್ಯವಾಗಿ ಶಿಕ್ಷಕರು ಮತ್ತು ಪ್ರಾಧ್ಯಾಪಕರು ತಮ್ಮ ಬಿಡುವಿನ ವೇಳೆಗಾಗಿ ಏನೆಲ್ಲ ಹವ್ಯಾಸಗಳನ್ನು ರೂಢಿಸಿಕೊಂಡಿರುತ್ತಾರೆ. ಅವುಗಳು ಅವರ ದೈನಂದಿನ ಪಾಠ ಬೋಧನೆಗೆ ಪೂರಕವಾಗಿದ್ದರೆ ಕಲಿಕೆಯಲ್ಲಿ ಮತ್ತಷ್ಟು ಹೊಸತನವನ್ನು ತರಬಹುದು. ಇಂತಹದ್ದಕ್ಕೆ ಅನ್ವರ್ಥಕವಾಗಿರುವ ಪ್ರಾಣಿಶಾಸ್ತ್ರ ಉಪನ್ಯಾಸಕ ಜಗದೀಶ ಬಸವರಾಜ ಚಿತ್ತರಗಿ ಕಳೆದ ಐದು ವರ್ಷಗಳಿಂದ ಉರಗ ರಕ್ಷಣೆಯಲ್ಲಿ ತೊಡಗಿರುವುದು ಗಮನಾರ್ಹ ಸಂಗತಿ.

ಇವರು ತಮ್ಮ ಕಾಲೇಜು ದಿನಗಳಲ್ಲಿಯೇ ಹಾವುಗಳ ಅಧ್ಯಯನಕ್ಕೆ ಮುಂದಾಗಿ ನಂತರ ಧಾರವಾಡ ಕ.ವಿ.ವಿ ಯಿಂದ ಪ್ರಾಣಿಶಾಸ್ತ್ರದಲ್ಲಿ ಸ್ನಾತಕೋತ್ತರ ಮತ್ತು ಎಂ.ಫಿಲ್. ಪದವಿಯನ್ನು ಪಡೆದಿದ್ದಾರೆ. ಆಗಲೇ ಶೈಕ್ಷಣಿಕ ಪ್ರವಾಸ ಹೋದಾಗ ಕಾಳಿಂಗ ಸರ್ಪದ ಮೇಲೆ ಸಂಶೋಧನೆ ಮಾಡಿದ ಉರಗ ಸಂಶೋಧಕ ಗೌರಿಶಂಕರ ಅವರಿಂದ ಸ್ಫೂರ್ತಿ ಪಡೆದರು. ಕಾರ್ಕಳ ಸಮೀಪದ ಹೆಬ್ರಿಯ ವಲಯ ಅರಣ್ಯಾಧಿಕಾರಿಯಾಗಿದ್ದ ಎಂ.ಬಿ.ಅಂಗಡಿ  ಹಾಗೂ ತಮ್ಮ ಗುರುಗಳಾದ ಪ್ರೊ.ಎಂ.ಸಿ.ಅಕ್ಕಿ ಅವರ ಪ್ರೋತ್ಸಾಹದಿಂದ ಹಾವು ಹಿಡಿದು ರಕ್ಷಿಸುವಲ್ಲಿ ಮುಂದಾದರು. ಹುನಗುಂದದ ಹೊರವಲಯದಲ್ಲಿರುವ ಇವರ ಮನೆಯಲ್ಲಿ ಬರುತ್ತಿದ್ದ ಹಾವುಗಳನ್ನು ಮೊದಮೊದಲು ಹಿಡಿದು ಅಭ್ಯಸಿಸಿ ಮತ್ತೆ ಕಾಡಿಗೆ ಬಿಡುವ ಪರಿಪಾಠ ಇಟ್ಟುಕೊಂಡ ಜಗದೀಶ, ನಂತರ ಇದಕ್ಕೆ ಪೂರಕ ಆಗುವಂತೆ ನ್ಯಾಷನಲ್ ಜಿಯಾಗ್ರಾಫಿಕ್ ಚಾನೆಲ್ ನೋಡಿ ಹಾವು ಹಿಡಿಯುವ ಅನೇಕ ತಂತ್ರಗಳನ್ನು ರೂಢಿಸಿಕೊಂಡಿದ್ದಾರೆ. ಇದುವರೆಗೆ ಇನ್ನೂರು ವಿವಿಧ ಜಾತಿಯ ಹಾವುಗಳನ್ನು ಇವರು ಹಿಡಿದಿದ್ದಾರೆ. ಅವುಗಳಲ್ಲಿ ರ್‍ಯಾಟ್, ಕೋಬ್ರಾ (ನಾಗರಹಾವು), ರಸೆಲ್ ವೈಪರ್, ಸಾ ಸ್ಕೇಲ್ ವೈಪರ್, ಕ್ರೇಟ್, ಕ್ಯಾಟ್, ಟ್ರಿಂಕೆಟ್, ಕೀಲ್‌ಬ್ಯಾಕ್, ವೂಲ್ಫ್, ಕುಕ್ಕರಿ, ನೀರಹಾವು, ಚಿಣಗಿ ಹಾವು, ಎರಡು ತಲೆಹಾವು ಪ್ರಮುಖವಾದವು.



‘ಹಾವುಗಳನ್ನು ಹಿಡಿಯುವ ಹವ್ಯಾಸ ಸರಳವಲ್ಲ. ಆದರೆ ಈ ಕಾರ್ಯ ದಲ್ಲಿ ಸಾಕಷ್ಟು ಎಚ್ಚರದಿಂದ ತೊಡಗಬೇಕು. ಅದಕ್ಕಿಂತ ಮುಖ್ಯವಾಗಿ ಹಾವು ಸಂತತಿ ಉಳಿಸುವ ನಿಟ್ಟಿನಲ್ಲಿ ಎಲ್ಲರ ಸಹಕಾರ ಅಗತ್ಯ’ ಎನ್ನುತ್ತಾರೆ ಜಗದೀಶ.

‘ಹಾವುಗಳೆಂದರೆ ಭಯಪಡುವ ಜನರಲ್ಲಿ ಇಂದು ಜಾಗೃತಿ ಮೂಡಿಸಬೇಕಾಗಿದೆ. ಹಾವು ರೈತನ ಒಡನಾಡಿ. ಹಾವುಗಳ ನಾಶ ನಮ್ಮ ಆಹಾರ ಸರಪಳಿಗೆ ಸಂಚಕಾರ ತರಲಿದೆ. ಇಲ್ಲದ ನಂಬಿಕೆ ಮತ್ತು ದೈವಕಲ್ಪನೆಗಿಂತ ಹಾವುಗಳ ರಕ್ಷಣೆಯಲ್ಲಿ ತೊಡಗುವುದು ಇಂದು ತುರ್ತು ಅಗತ್ಯವಿದೆ. ಕಾನೂನು ದೃಷ್ಟಿಯಿಂದ ಹಾವು ಕೊಲ್ಲುವುದು ದೊಡ್ಡ ಅಪರಾಧ ಎಂಬ ಅರಿವು ಸಾರ್ವಜನಿಕರಲ್ಲಿ ಮೂಡಬೇಕು’ ಎನ್ನುತ್ತಾರೆ ಜಗದೀಶ. ಕಳೆದ ಐದು ವರ್ಷಗಳಿಂದ ಹುನಗುಂದ ತಾಲ್ಲೂಕಿನಲ್ಲಿ ‘ಉರಗ ರಕ್ಷಕ ಉಪನ್ಯಾಸಕ’ ಎಂದೇ ಪ್ರಸಿದ್ಧಿಯಾದ ಜಗದೀಶ ತಮ್ಮ ನಿತ್ಯದ ಬೋಧನೆಯ ಜೊತೆಗೆ ಆಸಕ್ತ ಹತ್ತಾರು ವಿದ್ಯಾರ್ಥಿಗಳಿಗೆ ತರಬೇತಿ ನೀಡಿದ್ದಾರೆ. ಈಗಾಗಲೇ ಹಿಡಿದ ಹಾವುಗಳು ಮತ್ತು ರಕ್ಷಣೆಯ ಬಗ್ಗೆ ಅನೇಕ ಬಾರಿ ಜಾಗೃತಿ ಪ್ರಾತ್ಯಕ್ಷಿಕೆ ನಡೆಸಿದ್ದಾರೆ. ಆ ಮೂಲಕ ಹತ್ತಾರು ಯುವಕರು ಸಿದ್ಧಗೊಂಡಿದ್ದಾರೆ. ■

